**Office of the Chief Electoral Officer, Karnataka**
Nirvachana Nilaya, Sheshadri Road, Bangalore-560 001.
Telephone 080-22224212

**No. DPAR 05 MC 2018** **Date: 01.04.2018**

**PRESS NOTE**

Based on the information gathered from District Election Officers and Superintendent of Police, the following information on Model Code of Conduct violation and Law & Order enforcement is provided:

**Model Code of Conduct:**

As on date there are 1156 Flying Squads and 1255 Static Surveillance Teams have been activated. Flying Squads and other Model Code of Conduct Teams constituted for the purpose of enforcement on Model Code of Conduct have removed **03** Postures and 02 other publicity materials in the last 24 hours. Cumulatively removed **12537** number of Wall Writing, **17693** number of posters and **7711** number of banners from public property and have lodged **06** Cases under Karnataka Open Places (Provisions of disfigurement) act 1981. From Private Property cumulatively **6866** number of Wall Writing, **7949** number of posters and **2543** number of banners were removed.

Further, **04** FIRs have lodged for inducement and gratification to electors in the last 24 hours. Cumulatively, one FIR has been lodged for misuse of government vehicle, one FIR has been lodged for violation of loudspeaker, 2 FIR have been lodged for illegal meeting without permission, **09** FIRs have been lodged inducement and gratification to electors.

Further, Flying Squads and Static Surveillance Teams have seized Cash of Rs. 86 lakhs, seized items like 10 Sarees, 160 Laptops and one vehicle under Model Code of Conduct violation in last 24 hours. Cumulatively, the Flying Squads & Static Surveillance Teams have seized **1,12,90,720** cash, **18.90** ltrs of liquor, **18** Sarees, 2Kg 464 Grams gold worth **Rs. 49,17,000/-.**

While Excise department have seized 704.13 ltrs of liquor and booked 30 Heinous cases, 69 cases for Breach of Licence conditions and 98 cases under Section 15 (a) of Karnataka Excise act 1965 in last 24 hours. Cumulatively, **1921.13** ltrs of liquor and booked **90** Heinous cases, **111** cases for Breach of Licence Conditions and **246** cases under Section 15 (a) of Karnataka Excise act 1965.

**LAW & ORDER:**

5766 arms have been got deposited, 577 persons were bounded over, and 1660 Non-bailable warrants were executed in the last 24 hours. Cumulatively, **27,025** arms have been got deposited, one armed license has been cancelled, **2230** preventive actions are taken, **755** persons were bonded over, and **3823** Non-bailable warrants were executed from the date of enforcement of elections.

(Sanjiv Kumar)
Chief Electoral Officer and
Ex-officio Additional Chief Secretary,
DPAR (Elections)

ಮುಖ್ಯ ಚುನಾವಣಾಧಿಕಾರಿಗಳ ಕಛೇರಿ, ಕರ್ನಾಟಕ ಹಾಗೂ
ಪದನಿಮಿತ್ತ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಸಿ.ಆಸು.ಇ. (ಚುನಾವಣೆಗಳು)
ನಿರ್ವಾಚನ ನಿಲಯ, ಶೇಷಾದ್ರಿ ರಸ್ತೆ, ಬೆಂಗಳೂರು-560001.

ಸಂಖ್ಯೆ: ಸಿಆಸುಇ 05 ಮಾಸೆ 2018 ದಿನಾಂಕ: 01-04-2018

## ಪತ್ರಿಕಾ ಟಿಪ್ಪಣಿ

ಜಿಲ್ಲಾ ಚುನಾವಣಾಧಿಕಾರಿಗಳು ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಂದ ಸಂಗ್ರಹಿಸಿದ ಮಾಹಿತಿಯ ಆಧಾರದ ಮೇಲೆ ಮಾದರಿ ನೀತಿ ಸಂಹಿತೆ ಉಲ್ಲಂಘನೆ ಮತ್ತು ಕಾನೂನು ಮತ್ತು ಸುವ್ಯವಸ್ಥೆ ಜಾರಿ ಕುರಿತಾದ ಮಾಹಿತಿಯನ್ನು ಒದಗಿಸಲಾಗಿದೆ.

### ಮಾದರಿ ನೀತಿ ಸಂಹಿತೆ

1,156 ಫ್ಲೈಯಿಂಗ್ ಸ್ಕ್ವಾಡ್ಸ್ ಮತ್ತು 1,255 ಸ್ಟಾಟಿಕ್ ಸರ್ವೆಲೆನ್ಸ್ ಟೀಮ್ಸ್‌ಗಳು ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿವೆ. ಮಾದರಿ ನೀತಿ ಸಂಹಿತೆ ಜಾರಿಗಾಗಿ ರಚಿಸಿದ ಫ್ಲೈಯಿಂಗ್ ಸ್ಕ್ವಾಡ್ಸ್ ಮತ್ತು ಇತರೆ ಮಾದರಿ ನೀತಿ ಸಂಹಿತೆ ತಂಡಗಳು 03 ಪೋಸ್ಟರ್‌ಗಳು ಮತ್ತು 02 ಇತರೆ ಪ್ರಚಾರ ಸಾಮಗ್ರಿಗಳನ್ನು ಕಳೆದ 24 ಗಂಟೆಗಳಲ್ಲಿ ತೆಗೆದುಹಾಕಲಾಗಿದೆ. ಒಟ್ಟಾರೆಯಾಗಿ 12537 ಗೋಡೆ ಬರಹಗಳು, 17,693 ಪೋಸ್ಟರ್‌ಗಳು, ಮತ್ತು 7,711 ಬ್ಯಾನರ್‌ಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ ತೆಗೆದುಹಾಕಲಾಗಿದೆ ಹಾಗೂ Karnataka Open Places (Provision of Disfigurement) Act 1981 ಪ್ರಕಾರ 6 ಪ್ರಕರಣಗಳನ್ನು ನೋಂದಾಯಿಸಲಾಗಿದೆ. ಖಾಸಗಿ ಜಾಗಗಳಲ್ಲಿ ಒಟ್ಟಾರೆ 6,866 ಗೋಡೆ ಬರಹ, 7,949 ಪೋಸ್ಟರ್‌ಗಳು ಮತ್ತು 2,543 ಬ್ಯಾನರ್‌ಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ ತೆಗೆದುಹಾಕಲಾಗಿದೆ.

ಇದಲ್ಲದೇ, ಕಳೆದ 24 ಗಂಟೆಗಳಲ್ಲಿ ಮತದಾರರಿಗೆ ಆಮಿಷ ಒಡ್ಡಿದ 4 ಪ್ರಕರಣಗಳಲ್ಲಿ FIR ಗಳನ್ನು ದಾಖಲಿಸಲಾಗಿದೆ. ಒಟ್ಟಾರೆ, ಸರ್ಕಾರಿ ವಾಹನದ ದುರುಪಯೋಗದ ಒಂದು ಪ್ರಕರಣದಲ್ಲಿ, ಧ್ವನಿವರ್ಧಕದ ಉಲ್ಲಂಘನೆಯ ಒಂದು ಪ್ರಕರಣದಲ್ಲಿ, ಪರವಾನಿಗೆ ಇಲ್ಲದೇ ಅನಧಿಕೃತ ಸಭೆಗಳನ್ನು ನಡೆಸಿದ 2 ಪ್ರಕರಣಗಳಲ್ಲಿ ಹಾಗೂ ಮತದಾರರಿಗೆ ಆಮಿಷ ಒಡ್ಡಿದ 9 ಪ್ರಕರಣಗಳಲ್ಲಿ FIR ಗಳನ್ನು ದಾಖಲಿಸಲಾಗಿದೆ.

ಅಲ್ಲದೇ, ಕಳೆದ 24 ಗಂಟೆಗಳಲ್ಲಿ ಫ್ಲೈಯಿಂಗ್ ಸ್ಕ್ವಾಡ್‌ಗಳು ಮತ್ತು ಸ್ಟಾಟಿಕ್ ಸರ್ವೆಲೆನ್ಸ್ ಟೀಮ್ಸ್‌ಗಳು ರೂ. 86 ಲಕ್ಷ ನಗದು, 10 ಸೀರೆಗಳು, 160 ಲ್ಯಾಪ್‌ಟಾಪ್‌ಗಳು ಮತ್ತು ಒಂದು ವಾಹನವನ್ನು ಮಾದರಿ ನೀತಿ ಸಂಹಿತೆ ಉಲ್ಲಂಘನೆಯಡಿ ವಶಪಡಿಸಿಕೊಳ್ಳಲಾಗಿದೆ. ಒಟ್ಟಾರೆ, ಫ್ಲೈಯಿಂಗ್ ಸ್ಕ್ವಾಡ್‌ಗಳು ಮತ್ತು ಸ್ಟಾಟಿಕ್ ಸರ್ವೆಲೆನ್ಸ್ ಟೀಮ್ಸ್‌ಗಳು 1,12,90,720 ನಗದು, ರೂ. 49,17,000 ಮೌಲ್ಯದ 18.90 ಲೀ. ಮದ್ಯ, 18 ಸೀರೆಗಳು ಮತ್ತು 2 ಕೆಜಿ 464 ಗ್ರಾಂಗಳ ಚಿನ್ನವನ್ನು ವಶಪಡಿಸಿಕೊಳ್ಳಾಗಿದೆ.

ಕಳೆದ 24 ಗಂಟೆಗಳಲ್ಲಿ, ಅಬಕಾರಿ ಇಲಾಖೆಯಿಂದ 704.13 ಲೀ. ಗಳಷ್ಟು ಮದ್ಯವನ್ನು ವಶಪಡಿಸಿಕೊಳ್ಳಲಾಗಿದೆ ಮತ್ತು 30 ಪ್ರಕರಣಗಳನ್ನು ದಾಖಲಿಸಿದೆ. ಮದ್ಯದ ಪರವಾನಿಗೆಯನ್ನು ಉಲ್ಲಂಘಿಸಿದ 69 ಪ್ರಕರಣಗಳನ್ನು ದಾಖಲಿಸಲಾಗಿದೆ. ಕರ್ನಾಟಕ ಅಬಕಾರಿ ಕಾಯ್ದೆ 1965ರ ಪರಿಚ್ಛೇದ 15 (ಎ) ಅನ್ವಯ 98 ಪ್ರಕರಣಗಳನ್ನು ದಾಖಲಿಸಲಾಗಿದೆ. ಒಟ್ಟಾರೆಯಾಗಿ, 1921.13 ಲೀ. ಗಳಷ್ಟು ಮದ್ಯವನ್ನು ವಶಪಡಿಸಿಕೊಳ್ಳಲಾಗಿದೆ ಮತ್ತು 90 ಪ್ರಕರಣಗಳು, ಮದ್ಯದ ಪರವಾನಿಗೆಯನ್ನು ಉಲ್ಲಂಘಿಸಿದ 111 ಪ್ರಕರಣಗಳು ಹಾಗೂ ಕರ್ನಾಟಕ ಅಬಕಾರಿ ಕಾಯ್ದೆ 1965ರ ಪರಿಚ್ಛೇದ 15 (ಎ) ಅನ್ವಯ 246 ಪ್ರಕರಣಗಳನ್ನು ದಾಖಲಿಸಲಾಗಿದೆ.

### ಕಾನೂನು ಮತ್ತು ಸುವ್ಯವಸ್ಥೆ

5766 ಪರವನಾಗಿ ಹೊಂದಿದ ಶಸ್ತ್ರಾಸ್ತ್ರಗಳನ್ನು ದಾಸ್ತಾನು ಮಾಡಲಾಗಿದೆ. ಕಳೆದ 24 ಗಂಟೆಗಳಲ್ಲಿ 577 ವ್ಯಕ್ತಿಗಳಿಂದ ಮುಚ್ಚಳಿಕೆಯನ್ನು ಪಡೆಯಲಾಗಿದೆ ಹಾಗೂ 1660 ಜಾಮೀನು ರಹಿತ ವಾರೆಂಟ್‌ಗಳನ್ನು ಹೊರಡಿಸಲಾಗಿದೆ. ಚುನಾವಣೆ ಘೋಷಣೆಯಾದ ದಿನಾಂಕದಿಂದ ಒಟ್ಟಾರೆ 27,025 ಪರವನಾಗಿ ಹೊಂದಿದ ಶಸ್ತ್ರಾಸ್ತ್ರಗಳನ್ನು ದಾಸ್ತಾನು ಮಾಡಲಾಗಿದೆ. ಒಂದು ಶಸ್ತ್ರಾಸ್ತ್ರದ ಪರವಾನಿಗೆಯನ್ನು ರದ್ದುಗೊಳಿಸಲಾಗಿದೆ. 2230 ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. 755 ವ್ಯಕ್ತಿಗಳಿಂದ ಮುಚ್ಚಳಿಕೆಯನ್ನು ಪಡೆಯಲಾಗಿದೆ ಹಾಗೂ 3823 ಜಾಮೀನು ರಹಿತ ವಾರೆಂಟ್‌ಗಳನ್ನು ಹೊರಡಿಸಲಾಗಿದೆ.

(ಸಂಜೀವ್ ಕುಮಾರ್)
ಮುಖ್ಯ ಚುನಾವಣಾಧಿಕಾರಿಗಳು ಮತ್ತು
ಪದನಿಮಿತ್ತ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಸಿಆಸುಇ, (ಚುನಾವಣೆಗಳು)